14. ಗೋವಾ–ಗೋಕರ್ಣ–ಜೋಗ್ ಫಾಲ್ಸ್ (5 ದಿನಗಳ ಪ್ರವಾಸ)
15. ಉತ್ತರ ಕರ್ನಾಟಕ ಪ್ರವಾಸ (5 ದಿನಗಳ ಪ್ರವಾಸ)
16. ಶಿವನಸಮುದ್ರ–ಸೋಮನಾಥಪುರ–ರಂಗನತಿಟ್ಟು (1 ದಿನದ ಪ್ರವಾಸ)
17. ಹೊಗೆನಕಲ್ ಫಾಲ್ಸ್–ಏರ್ಕಾಡ್ (2 ದಿನಗಳ ಪ್ರವಾಸ)
18. ಹೊಗೆನಕಲ್ ಫಾಲ್ಸ್–ಕೃಷ್ಣಗಿರಿ ಅಣೆಕಟ್ಟು (1 ದಿನದ ಪ್ರವಾಸ)
19. ಮಂತ್ರಾಲಯ–ಮಹಾನಂದಿ–ಶ್ರೀ ಶೈಲಂ–ನಾಗಾರ್ಜುನ ಸಾಗರ–ಹೈದರಾಬಾದ್
20. ಶಿಂಷಾ–ಮಲೆ ಮಹದೇಶ್ವರ ಬೆಟ್ಟ–ಬಿಳಿಗಿರಿ ರಂಗನಬೆಟ್ಟ–ಕೆ. ಗುಡಿ–ನಂಜನಗೂಡು–ಮೈಸೂರು ಅರಮನೆ (ದೀಪಾಲಂಕಾರ ಮಾತ್ರ)
21. ಮುನ್ನೂರು–ತೇಕ್ಕಡಿ–ಕೊಟ್ರಾಲಂ ಫಾಲ್ಸ್ (6 ದಿನಗಳ ಪ್ರವಾಸ)
22. ನಂದಿ ಬೆಟ್ಟ – ಮುದ್ದೇನಹಳ್ಳಿ (1 ದಿನದ ಪ್ರವಾಸ)
23. ಶ್ರವಣಬೆಳಗೊಳ–ಬೇಲೂರು–ಹಳೇಬೀಡು–ಮೈಸೂರು–ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ (2 ದಿನಗಳ ಪ್ರವಾಸ)
24. ಮೈಸೂರು–ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್–ಊಟಿ–ಕೂನೂರು–ದೊಡ್ಡಬೆಟ್ಟ (3 ದಿನಗಳ ಪ್ರವಾಸ)
25. ಬೇಲಂ ಗುಹೆಗಳು–ಮಹಾನಂದಿ–ಶ್ರೀ ಶೈಲ (5 ದಿನಗಳ ಪ್ರವಾಸ)
26. ಬೆಂಗಳೂರು ಸುತ್ತಮುತ್ತಲ ದೇವಾಲಯಗಳ ಪ್ರವಾಸ
27. ಬೆಂಗಳೂರು–ಧರ್ಮಸ್ಥಳ ಸರ್ವೀಸ್ (ಪ್ರತಿ ದಿನ)

ಈ ಕೆಳಕಂಡ ಸ್ಥಳಗಳಲ್ಲಿ ಕೆ.ಎಸ್.ಟಿ.ಡಿ.ಸಿ. ಹೋಟೆಲುಗಳನ್ನು ನಿರ್ವಹಿಸಲಾಗುತ್ತಿದೆ:

1) ಬಿಜಾಪುರ 2) ಬಾದಾಮಿ 3) ಬೆಳಗಾವಿ 4) ಕಮಲಾಪುರ 5) ಟಿ.ಬಿ. ಡ್ಯಾಂ 6) ಜೋಗ್‌ಫಾಲ್ಸ್ 7) ಮಡಿಕೇರಿ 8) ಹಳೇಬೀಡು 9) ಬೇಲೂರು 10) ಕೆ.ಆರ್.ಎಸ್. 11) ಮೈಸೂರು 12) ಶ್ರೀರಂಗಪಟ್ಟಣ 13) ಮಲೆಕಾಮನಹಳ್ಳಿ 14) ಊಟಿ 15) ತಿರುಮಲ 16) ಎಡಿಯೂರು 17) ನಂದಿಬೆಟ್ಟ 18) ಮುಳಬಾಗಿಲು

ಈ ಕೆಳಕಂಡ ಸ್ಥಳಗಳಲ್ಲಿ ಪ್ರವಾಸಿ ಮಾಹಿತಿ ಕೇಂದ್ರಗಳನ್ನು ತೆರೆಯಲಾಗಿದೆ:

1) ಬೆಂಗಳೂರು 2) ಮೈಸೂರು 3) ಮಂಡ್ಯ 4) ಚಾಮರಾಜನಗರ 5) ಮಡಿಕೇರಿ 6) ಮಂಗಳೂರು 7) ಉಡುಪಿ 8) ಹಾಸನ 9) ಬೇಲೂರು 10) ಹಳೇಬೀಡು 11) ಶ್ರವಣಬೆಳಗೋಳ 12) ಶಿವಮೊಗ್ಗ 13) ಜೋಗ್ ಫಾಲ್ಸ್ 14) ಕಾರವಾರ 15) ಧಾರವಾಡ 16) ಗದಗ್ 17) ಹೊಸಪೇಟೆ 18) ಚಿತ್ರದುರ್ಗ 19) ಹಾವೇರಿ 20) ತುಮಕೂರು 21) ಕೋಲಾರ 22) ರಾಯಚೂರು 23) ಗುಲ್ಬರ್ಗಾ 24) ಬಿಜಾಪುರ 25) ಬಸವಕಲ್ಯಾಣ 26) ಬಾಗಲಕೋಟೆ 27) ಐಹೊಳೆ 28) ಬಾದಾಮಿ 29) ಬನವಾಸಿ 30) ಬೆಳಗಾಂ 31) ಗೋವಾ 32) ಮುಂಬೈ 33) ನವದೆಹಲಿ

ನಾಗರಹೊಳೆ ಅರಣ್ಯದಲ್ಲಿ ಪೊಲೀಸ್ ಇಲಾಖೆ ಅಧಿಕಾರಿಗಳು ಮರಗಳ ಕಳ್ಳತನದಲ್ಲಿ ಭಾಗಿಯಾಗಿರುವುದು

2449 (3213) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗರಹೊಳೆ ಅರಣ್ಯದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಮರಗಳ ಕಳ್ಳತನದಲ್ಲಿ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಅಧಿಕಾರಿಗಳ ವಿವರ ನೀಡುವುದು;

ಆ) ಅಂತಹ ಅಧಿಕಾರಿಗಳು ಇಲ್ಲಿಯವರೆಗೆ ಎಷ್ಟು ಮೊತ್ತದ ಮರಗಳನ್ನು ಕಳ್ಳತನ ಮಾಡಿದ್ದಾರೆ; (ವಿವರ ನೀಡುವುದು)

ಇ) ಆ ಅಧಿಕಾರಿಗಳನ್ನು ಅರಣ್ಯ ಇಲಾಖೆಯವರು ರಕ್ಷಿಸುತ್ತಿರುವುದು ನಿಜವೇ;

ಈ) ಹಾಗಿದ್ದರೆ, ಮರಗಳ್ಳತನದಲ್ಲಿ ಭಾಗಿಯಾಗಿದ್ದ ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):

ಅ) ಒಂದು ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆ.

ಕರ್ನಾಟಕ ಮೀಸಲು ಪಡೆಗೆ ಸೇರಿದ ಇಬ್ಬರು ಆರಕ್ಷಕ ಸಿಬ್ಬಂದಿಗಳು ಮರಗಳ್ಳತನದಲ್ಲಿ ಶಾಮೀಲಾಗಿರುವುದು ಕಂಡು ಬಂದಿದೆ.

1. ಶ್ರೀ ಮಹಾದೇವ ಮತ್ತು 2. ಶ್ರೀ ಪುಟ್ಟಲಿಂಗೇಗೌಡ

ಇವರು ಕರ್ನಾಟಕ ರಾಜ್ಯ ಮೀಸಲು ಪಡೆ ಘಟಕ, ಮೈಸೂರಿಗೆ ಸೇರಿದವರಾಗಿದ್ದಾರೆ.

ಶ್ರೀ ಮಹಾದೇವ ಎಂಬ ವ್ಯಕ್ತಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ಮೇರೆಗೆ ಅವರನ್ನು ಕೆ.ಆರ್. ನಗರ ಬಂಧೀಖಾನೆಯಲ್ಲಿ ಬಂಧಿಸಲಾಗಿದೆ. ಇನ್ನೊಬ್ಬ ಅಪರಾಧಿ ಶ್ರೀ ಪುಟ್ಟಲಿಂಗೇಗೌಡ ಇವರು ತಲೆಮರೆಸಿಕೊಂಡಿರುತ್ತಾರೆ ಹಾಗೂ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.

ಆ) ಈ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಬರ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಆಹಾರಧಾನ್ಯ

2450 (3214) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬರ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಆಹಾರ ಧಾನ್ಯವೆಷ್ಟು;

ಆ) ಆ ಆಹಾರಧಾನ್ಯಗಳನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಈ ಆಹಾರ ಧಾನ್ಯಗಳಲ್ಲಿ ಎಷ್ಟನ್ನು ಉಪಯೋಗಿಸಲಾಗಿದೆ; ಉಳಿದಿರುವ ಆಹಾರಧಾನ್ಯವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಈ) ಬರ ಕಾಮಗಾರಿಗಾಗಿ ಬಿಡುಗಡೆ ಮಾಡಿರುವ ಆಹಾರಧಾನ್ಯಗಳನ್ನು ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದರೆ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಊ) ಈ ಬಗ್ಗೆ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ?